**ಪ್ರಕಟಣೆ**

**ಅಧ್ಯಕ್ಷರು** : ಈಗ ಒಂದು ಪ್ರಕಟಣೆ ಇದೆ. ಈಗ ಏನು ಚರ್ಚೆ ನಡೆಯುತ್ತಿದೆ, ಅದಕ್ಕೆ ಒಂದು time Limitation fix ಮಾಡುತ್ತಿದ್ದೇನೆ. ಎಲ್ಲರೂ ಸಹಕಾರ ಕೊಡಬೇಕು ಎಂದು ಬೆಳಿಗ್ಗೆ ಮನವಿ ಮಾಡಿದೆ. ಈಗ ಸಮಯ ನಿಗದಿ ಮಾಡಿರುವುದನ್ನು ಎಲ್ಲರಿಗೂ ಹೇಳಿ ಬಿಡುತ್ತೇನೆ. ನಿನ್ನೆಯಿಂದ ಏನು ಚರ್ಚೆ ಪ್ರಾರಂಭವಾಗಿದೆ, ನಿನ್ನೆಯಿಂದ ಇವತ್ತಿನವರೆಗೂ ಮಾತನಾಡಿದವರನ್ನು ಸೇರಿಸಿಕೊಂಡು ಸಮಯವನ್ನು calculation ಮಾಡಿದ್ದೇನೆ.

ದಿನಾಂಕ: 09.09.2009 ರಿಂದ ಸದನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತು ನಡೆಯುತ್ತಿರುವ ಚರ್ಚೆಗೆ ವಿವಿಧ ಪಕ್ಷಗಳಿಗೆ ಈ ಕೆಳಕಂಡಂತೆ ಸಮಯಾವಕಾಶವನ್ನು ನಿಗದಿಪಡಿಸಿದೆ. ಭಾರತೀಯ ಜನತಾ ಪಕ್ಷಕ್ಕೆ ಸಂಖ್ಯೆ ಪ್ರಕಾರ ಏಳೂವರೆ ಗಂಟೆ ಸಮಯಾವಕಾಶವನ್ನು ಕೊಡಬೇಕು. ಅವರಿಗೆ ಆರು ಗಂಟೆ ಸಮಯಾವಕಾಶವನ್ನು ನಿಗದಿ ಮಾಡಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ಐದು ಗಂಟೆ ಕೊಡಬೇಕಾಗಿತ್ತು, ಅವರಿಗೆ ಆರು ಗಂಟೆ ಸಮಯಾವಕಾಶವನ್ನು ನಿಗದಿ ಮಾಡಿದ್ದೇನೆ. ಜೆಡಿ(ಎಸ್) ಪಕ್ಷಕ್ಕೆ ಎರಡು ಗಂಟೆ ಇತ್ತು, ಅವರಿಗೆ ಎರಡೂವರೆ ಗಂಟೆ ಸಮಯಾವಕಾಶವನ್ನು ಕೊಟ್ಟಿದ್ದೇನೆ. ಎಲ್ಲಾ ಒಟ್ಟು ಹದಿನಾಲ್ಕೂವರೆ ಗಂಟೆ ಆಗುತ್ತದೆ. ನಾಳೆ ಮಧ್ಯಾಹ್ನ ಒಂದು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದು ಸೇರಿ ಎರಡು ಗಂಟೆಯವರೆಗೆ ಎಂದು ಲೆಕ್ಕಾಚಾರ ಮಾಡಿದರೆ ಇಷ್ಟು ಅವಧಿ ಬೇಕಾಗುತ್ತದೆ ಎಂದು ನಾನು ನಿಗದಿ ಮಾಡಿದ್ದೇನೆ. ದಯವಿಟ್ಟು ಎಲ್ಲಾ ಸದಸ್ಯರು ಇದಕ್ಕೆ ಸಹಕಾರ ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗ ನಾವು ಚರ್ಚೆಯನ್ನು ಮಧ್ಯಾಹ್ನ ಮುಂದುವರೆಸೋಣ. ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು 2.00 ಗಂಟೆಗೆ ಮುಕ್ತಾಯಗೊಂಡು ಮತ್ತೆ 3.00 ಗಂಟೆಗೆ ಸೇರಲು ನಿಶ್ಚಯಿಸಿತು)**

**(ಸದನವು ಪುನಃ ಮಧ್ಯಾಹ್ನ 3 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.)**